**ಪಿ.ಡಬ್ಲ್ಯೂ : 1 - ವೀರತಪ್ಪ**

**ಸಾಕ್ಷಿಗೆ ದಿನಾಂಕಃ 11.01.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ :ಶ್ರೀ ಎಸ್.ಎಸ್. ವಕೀಲರಿಂದಃ**

ದಿ: 05.06.2020 ರಂದು ರಾತ್ರಿ 10-00 ಗಂಟೆಯ ಸಮಯದಲ್ಲಿ ಅಪಘಾತದಿಂದ ನನ್ನ ಮಗ ಮಹೇಶ ಮೃತಪಟ್ಟಿರುತ್ತಾನೆ. ನನ್ನ ಮಗ ಬೆಂಗಳೂರಿನಿಂದ ಬೈಕ್‌ನಲ್ಲಿ ಅವನೇ ಚಾಲನೆ ಮಾಡಿಕೊಂಡು ಬರುತ್ತಿದ್ದರು. ಹಿಂಬದಿಯಲ್ಲಿ ಮಾದೇಶ ಎಂಬುವವರು ಕುಳಿತಿದ್ದರು. ಸದರಿ ಬೈಕ್ ನನ್ನ ಮಗನದೇ ಆಗಿರುತ್ತದೆ. ಮಹೇಶ ನನ್ನ ಮಗ ಎಂಬ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿದ್ದೇನೆ. ನಾನು ಯಾವುದೇ ರೀತಿ ದಾಖಲೆಗಳನ್ನು ಹಾಜರುಪಡಿಸಿದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ಪೊಲೀಸರೇ ಪ್ರಕರಣವನ್ನು ದಾಖಲಸಿರುತ್ತಾರೆ. ಟ್ರ್ಯಾಕ್ಟರ್ ದೀಪ ಹಚ್ಚದೇ ರಸ್ತೆಯಲ್ಲಿ ನಿಲ್ಲಿಸಿದ್ದು, ನನ್ನ ಮಗ ಸದರಿ ವಾಹನಕ್ಕೆಡಿಕ್ಕಿ ಪಡಿಸಿರುತ್ತಾರೆ. ನನ್ನ ಮಗನಿಗೆ ಚಾಲನಾ ಪರವಾನಿಗೆ ಇತ್ತು.

2. ನಿಂತಿದ್ದ ಟ್ರ್ಯಾಕ್ಟರ್‌ಗೆ ನನ್ನ ಮಗ ಡಿಕ್ಕಿ ಪಡಿಸಿಲ್ಲ, ನನ್ನ ಮಗ ವಾಹನದಲ್ಲಿ ಬರುವಾಗ ಬೇರೆ ಯಾವುದೋ ವಾಹನ ಡಿಕ್ಕಿ ಪಡಿಸಿರುತ್ತದೆ ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ ನಿಲ್ಲಿಸಿದ್ದ ಬಗ್ಗೆ ನನಗೆ ಪೊಲೀಸರು ಹೇಳಿರುತ್ತಾರೆ. ಟ್ರ್ಯಾಕ್ಟರ್ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಅದೇ ದಿನ ಟ್ರ್ಯಾಕ್ಟರ್ ಗೆ ಡಿಕ್ಕಿ ಪಡಿಸಿದ ಬಗ್ಗೆ ತಿಳಿಸಿರುತ್ತಾರೆ. ನಾನು ಸ್ಥಳಕ್ಕೆ ಹೋಗಿಲ್ಲ. ನನ್ನ ಮಗ ಟ್ರ್ಯಾಕ್ಟರ್‌ನ ಯಾವ ಭಾಗಕ್ಕೆ ಡಿಕ್ಕಿ ಪಡಿಸಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. ನನಗೆ ಇಬ್ಬರು ಮಕ್ಕಳು. ನನ್ನ ಮಗ ಮಹದೇವ ಅಪಘಾತಕ್ಕೆ ಸಂಬಂಧಿಸಿದಂತೆ ದೂರು ನೀಡಿರುತ್ತಾರೆ ಎಂದರೆ ಸರಿ. ಸದರಿ ದೂರಿನಲ್ಲಿಯೂ ಸಹ ಬೇರೆ ವಾಹನ ಡಿಕ್ಕಿ ಪಡಿಸಿದ್ದು, ಟ್ರ್ಯಾಕ್ಟರ್‌ಗೆ ಡಿಕ್ಕಿ ಪಡಿಸಿದ್ದಾಗಿ ಹೇಳಿಲ್ಲ ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ ಮಾಲೀಕರೊಂದಿಗೆ ಶಾಮೀಲಾಗಿ 1 ತಿಂಗಳ ನಂತರ ಸುಳ್ಳು ದೂರನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಮೃತ ನನ್ನ ಮಗ ಎ.ಬಿ.ಬಿ.ಯಲ್ಲಿ ಕೆಲಸ ಮಾಡುತ್ತಿದ್ದರು. ಸುಮಾರು 15 ವರ್ಷಗಳಿಂದ ಎ.ಬಿ.ಬಿಯಲ್ಲಿ

ಕೆಲಸ ಮಾಡುತ್ತಿದ್ದರು. ಅವರಿಗೆ ತಿಂಗಳಿಗೆ 50-70 ಸಾವಿರ ಸಂಬಳ ಬರುತ್ತಿತ್ತು. ಆದರಿಂದ ನನಗೆ ಜೀವನ ನಡೆಯುತ್ತಿತ್ತು. ಸಂಬಳವನ್ನು ಯಾವ ರೀತಿಯಲ್ಲಿ ನೀಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಮಹೇಶ . ಎಂ ಎಂದು ನನ್ನ ಮಗನನ್ನು ಕರೆಯುತ್ತಾರೆ. ಟ್ರ್ಯಾಕ್ಟರ್ ಮತ್ತು ಟ್ರೈಲರ್ ನ ದಾಖಲಾತಿಗಳು ನನಗೆ ಪೊಲೀಸರು ಪಡೆದುಕೊಂಡಿರುತ್ತಾರೆ. ನನ್ನ ಮಗನ ಬ್ಯಾಂಕ್ ಪಾಸ್ ಬುಕ್‌ನ್ನು ನ್ಯಾಯಾಲಯಕ್ಕೆ ನೀಡಿಲ್ಲ.

3. ನನ್ನ ಮಗನಿಗೆ 35 ವರ್ಷ ವಯಸ್ಸಾಗಿತ್ತು. ನನ್ನ ಮಗನಿಗೆ 40- 41 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಎ.ಬಿ.ಬಿ.ಯಲ್ಲಿ ನನ್ನ ಮಗ 50 ರಿಂದ 1 ಲಕ್ಷ ಸಂಪಾದನೆ ಮಾಡುತ್ತಿದ್ದುದ್ದಾಗಿ ದಾಖಲೆಗಳನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ 12 ನ್ನು ಈ ಅರ್ಜಿಯ ಸಲುವಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಮಗ ಬೆಂಗಳೂರಿನಲ್ಲಿ ಒಬ್ಬನೇ ವಾಸವಿದ್ದು, ನಾನು ಹಿರಿಯ ಮಗನೊಂದಿಗೆ ವಾಸಿವಿದ್ದೆ ಎಂದರೆ ಸರಿಯಲ್ಲ. ಶವಸಂಸ್ಕಾರಕ್ಕೆ 1 ಲಕ್ಷ ಖರ್ಚು ಮಾಡಿರುವುದಾಗಿ ಸುಳ್ಳು ನುಡಯುತ್ತಿದ್ದೇನೆ ಎಂಧರೆ ಸರಿಯಲ್ಲ. ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮಗ ಚಾಲನೆ ಮಾಡುತ್ತಿದ್ದ ಬೈಕ್‌ಗೆ ವಿಮೆ ಮತ್ತು ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರರ ತಪ್ಪಿನೀಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

4. ಟ್ರ್ಯಾಕ್ಟರ್‌ನ್ನು ರಸ್ತೆಯಲ್ಲಿ ನಿಲ್ಲಿಸಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, 1ನೇ ಎದುರುದಾರರು ಮತ್ತು ಪೊಲೀಸರು ಸೇರಿ ವಾಹನವನ್ನು ಪ್ರಕರಣದಲ್ಲಿ ಸಿಲುಕಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಮಗನ ವೇತನ ದಾಖಲೆಯನ್ನು ಈ ಅರ್ಜಿಯ ಸಲುವಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ 1ನೇ ಎದುರುದಾರರ ವಾಹನವನ್ನು ಸಿಲುಕಿಸಲಾಗಿದೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

ಓ ಹೇ ಕೇ ಸ ಇದೆ
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ ಎ ಸಿ ಟಿ, ಮಳವಳ್ಳಿ.